## ಇಂಧನ ಅಭಾವದಿಂದಾಗಿ ಜಾಗೃತಿ

1970ರಲ್ಲಿ ಇಂಧನದ ಅಭಾವ ಡೆನ್ಮಾರ್ಕ್ ದೇಶವನ್ನು ಬಾಧಿಸಿದಾಗ ಅಲ್ಲಿ ಪರಿಸರ ಜಾಗೃತಿಯ ಚಳವಳಿಗಳು ಜನಪ್ರಿಯವಾದವು. ಆಗ ಸರ್ಕಾರ 'ಕಾರು ಮುಕ್ತ ಭಾನುವಾರ'ವನ್ನು ಜಾರಿಗೊಳಿಸಿತು. ಜನರಿಗೆ ಆ ದಿನವೇ ವಾರದ ಅತ್ಯುತ್ತಮ ದಿನ ಎನಿಸಿತು.

'ಡೇನಿಷ್ ಸೈಕ್ಲಿಸ್ಟ್ಸ್ ಫೆಡರೇಷನ್' ಎನ್ನುವ, ಆವರೆಗೆ ಜೂಗರಿಸುತ್ತಿದ್ದ ಸಂಘಟನೆ ಇಂಧನ ಅಭಾವದ ದಿನಗಳಲ್ಲಿ ಜಾಗೃತವಾಯಿತು. ಅದು ರಸ್ತೆಗಳಲ್ಲಿ ಸೈಕ್ಲಿಸ್ಟರ ಸುರಕ್ಷತೆಗೆ ಆದ್ಯತೆ ನೀಡಬೇಕೆಂದು ಹಕ್ಕೊತ್ತಾಯ ತಂದಿತು. ಹೀಗಾಗಿ, ಯೋಜನಾಬದ್ಧ ಸೈಕಲ್ ಪಥಗಳು ನಿರ್ಮಾಣವಾದವು.

ಕೋಪೆನ್‌ಹೇಗನ್ ಮುನಿಸಿಪಾಲಿಟಿ ಸೈಕಲ್ ಸವಾರರ ಅಭಿಪ್ರಾಯಗಳನ್ನೂ ಪಡೆದುಕೊಳ್ಳುತ್ತದೆ. ಅದರಂತೆ 'ಹಸಿರು ಬೈಸಿಕಲ್ ಮಾರ್ಗಗಳು', ಅಂದರೆ ಮುಖ್ಯರಸ್ತೆಯ ಸಂಚಾರಕ್ಕನುಗುಣವಾಗಿಯೇ ಉದ್ಯಾನವನಗಳಲ್ಲಿ ಹಾಗೂ ಇನ್ನಿತರ ಹಸಿರು ಮರಗಳೆಡೆಯಲ್ಲಿ ಸೈಕಲ್ ಪಥಗಳನ್ನು ರೂಪಿಸಿದೆ.

ಸೈಕಲ್ ಸವಾರಿಯಿಂದಾಗಿ ಜನರು ಹೃದ್ರೋಗ ಸಂಬಂಧಿ ಸಮಸ್ಯೆಗಳಿಂದ ದೂರವಾಗಿರುವುದು, ವಯಸ್ಕರ ಆಯುಸ್ಸು ಹೆಚ್ಚಳ, ಅಪಾರ ಪ್ರಮಾಣದ ರಾಷ್ಟ್ರೀಯ ಆದಾಯದ ಹೆಚ್ಚಳವಾಗಿರುವುದು ಅಧ್ಯಯನಗಳಿಂದ ಸಾಬೀತಾಗಿದೆ. ಪರಿಸರವನ್ನು ಶುದ್ಧವಾಗಿಡುವಲ್ಲಿಯೂ ಸೈಕಲ್‌ಗಳದು ಪ್ರಮುಖ ಪಾತ್ರ.



ಸೈಕಲ್ ಸವಾರಿಗಾಗಿ ವಿಶೇಷ ಪಥ



ನಾಯಿಗಳೆಂದರೆ ಡೆನ್ಮಾರ್ಕ್ ನಾಗರಿಕರಿಗೆ ಇನ್ನಿಲ್ಲದ ಪ್ರೀತಿ



ನಾಯಿಗಳನ್ನು ಮಕ್ಕಳಂತೆ ಅವುಚಿಕೊಂಡು ಹೋಗುವವರ ದೃಶ್ಯಗಳು ಇಲ್ಲಿ ಸಾಮಾನ್ಯ



ನಗರದ ಮುಖ್ಯರಸ್ತೆಯಲ್ಲೂ ಸೈಕಲ್ ಸವಾರಿ ಸಲೀಸು

ಹೀಗಾಗಿ ಸುರಕ್ಷಿತವಾಗಿ ಸೈಕಲ್ ಸವಾರಿ ಅಲ್ಲಿ ಸಾಧ್ಯ.

ಕೋಪೆನ್‌ಹೇಗನ್‌ನಲ್ಲಿ ವಿಧವಿಧವಾದ ಸೈಕಲ್‌ಗಳ ಬಳಕೆ ಕಾಣಬಹುದು. ಮುಂಭಾಗದಲ್ಲಿ ಮಾಡು ಹೊಂದಿದ ಗೂಡಿನ ಮೂರು ಚಕ್ರಗಳ ಕಾರ್ಗೋ ಬೈಸಿಕಲ್ ಇಬ್ಬರು ಮಕ್ಕಳನ್ನು ಸಾಗಿಸುವುದಕ್ಕಾಗಿ ಬಳಕೆಯಾಗುತ್ತದೆ. ನಾಯಿಗಳಿಗಾಗಿ ವಿಶೇಷ ಸೈಕಲ್‌ಗಳಿವೆ.

ಅಂಚೆ ಬಟವಾಡೆಗೂ, ಪೊಲೀಸ್ ಗಸ್ತಿಗೂ, ರಸ್ತೆ ಗುಡಿಸುವವರಿಗೂ ಸೈಕಲ್ಲೇ ಬೇಕು. ನಾವು ಪ್ರಸಿದ್ಧ ಟಿವೋಲಿ ಗಾರ್ಡನ್ ಎದುರಲ್ಲಿ ನಿಂತಿದ್ದಾಗ ಎರಡು ಸೈಕಲ್ ರಿಕ್ಷಾಗಳನ್ನು ಕಂಡೆವು. ಅವುಗಳನ್ನು ಕಾಫಿ, ಚಾಕ್ಲೇಟ್, ಐಸ್‌ಕ್ರೀಂ ಇತ್ಯಾದಿಗಳನ್ನು ಮಾರುವ ಸಂಚಾರಿ ಅಂಗಡಿಯನ್ನಾಗಿಯೂ ಬಳಸುವರಂತೆ. ಮೋಟಾರ್ ಬೈಕ್‌ಗಳು ನಗರದಲ್ಲಿ ಎಷ್ಟು ಅಪರೂಪವೆಂದರೆ, ಒಂದು ದಿನದಲ್ಲಿ ನಗರದಲ್ಲಿ ಕೇವಲ ಮೂರು ಬೈಕ್‌ಗಳನ್ನು ಕಂಡೆವು.

### ಶ್ವಾನ ಮೋಹ

ಕೋಪೆನ್‌ಹೇಗನ್ ನಗರ ಮತ್ತೊಂದು ವೈಶಿಷ್ಟ್ಯ ಅಲ್ಲಿನವರ ನಾಯಿ ಪ್ರೀತಿ. ಬೆಕ್ಕಿನ ಮರಿಯಂಥ ನಾಯಿಗಳಿಂದ ಹಿಡಿದು ಹುಲಿಮರಿಯಂಥ ನಾಯಿಗಳವರೆಗೆ ಅವುಗಳ ಕೊರಳು ಪಟ್ಟಿ ಹಿಡಿದು ಹೋಗುವವರು, ಎತ್ತಿಕೊಂಡು ಹೋಗುವವರು, ಸೈಕಲ್‌ಗಳಲ್ಲಿ ಒಯ್ಯುವವರು, ಎರಡು ಮೂರು ನಾಯಿಗಳನ್ನು ಒಟ್ಟಿಗೆ ಕರೆದೊಯ್ಯುವವರು... ಅಬ್ಬಬ್ಬಾ! ಯಾವುದನ್ನು ನೋಡುವುದು, ಯಾವುದನ್ನು ಬಿಡುವುದು!

ಬೆಕ್ಕು ಕೂಡ ಅವರಿಗೆ ಪ್ರಿಯವಾದುದು. ನಾಯಿಗಳಿಗೆ ಬಸ್ಸು, ರೈಲು, ಟ್ಯಾಕ್ಸಿಗಳಲ್ಲದೆ, 'ವಾಟರ್‌ಬಸ್' ಎನ್ನಲಾಗುವ ಹಡಗಿನಲ್ಲೂ ಪ್ರವೇಶವಿದೆ. ಲ್ಯಾಬ್ರಡಾರ್, ಜರ್ಮನ್ ಶೆಫರ್ಡ್ ತಳಿಗಳನ್ನೇ ಹೆಚ್ಚು ಇಷ್ಟಪಡುವ ಡೇನರು ತಮ್ಮ ಸಾಕುಪ್ರಾಣಿಗಳಿಗಾಗಿ ಹಣ ಖರ್ಚುಮಾಡಲು ಹಿಂದೆಮುಂದೆ ನೋಡುವವರಲ್ಲ. ತಮ್ಮ ಮಕ್ಕಳಿಗೆ ಪ್ರಾಣಿದಯೆ ಮೂಡಿಸಲು ಕೂಡ ಅವು ಅಗತ್ಯ ಎಂದಳು ಲೋವಾ.

ಸೈಕಲ್ ಪ್ರೀತಿ ಹಾಗೂ ಶ್ವಾನ ಮೋಹ ಅದಕ್ಕೆ ಸಂಬಂಧಿಸಿದ ಹಲವು ಉದ್ಯಮಗಳನ್ನೂ ಹುಟ್ಟುಹಾಕಿವೆ. ನಗರದಲ್ಲಿ ಮುನ್ನೂರಕ್ಕೂ ಹೆಚ್ಚು ಸೈಕಲ್ ಶಾಪ್‌ಗಳಿವೆ ಹಾಗೂ ಸಗಟು ವ್ಯಾಪಾರಿಗಳಿದ್ದಾರೆ. ಬೈಸಿಕಲ್ ಬಾಡಿಗೆಗೆ ಕೊಡುವ ಅಂಗಡಿಗಳಿವೆ. ಪ್ರಾಣಿಗಳಿಗೂ ಮನೆಯ ಮಕ್ಕಳಿಗೆ ನೀಡುವಂಥ ಸೌಲಭ್ಯ ಒದಗಿಸುವ ಡೇನರಿಂದಾಗಿ ಅವಕ್ಕೆ ಸಂಬಂಧಿಸಿದ ಅಂಗಡಿಗಳಿವೆ. ಕಾರು ಬಳಸುವುದೇ ಪ್ರತಿಷ್ಠೆ ಎಂಬ ಪೊಳ್ಳುತನ ಬದಿಗೊತ್ತಿ ಕೈಕಾಲು ಬಳಸಿ ದೈಹಿಕ ಆರೋಗ್ಯ, ನಗರ ನೈರ್ಮಲ್ಯ ಕಾಪಾಡುತ್ತಾ ರಾಷ್ಟ್ರಾದಾಯ ಹೆಚ್ಚಿಸುವ ಡೇನರ ಸೈಕಲ್ ಪ್ರೀತಿ ಹಾಗೂ ಪ್ರಾಣಿದಯೆಯ ಶ್ವಾನಪ್ರೀತಿ ಅನುಕರಣೀಯ. ■